**ಓ ಎಸ್ ನಂಃ 294-16**
**ಪಿ ಡಬ್ಲ್ಯೂ ಃ 1**

**ದಿಃ 16-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ತಂದೆಯ ತಂದೆ ಹೆಸರು ಗಾಳಿ ಹನುಮಯ್ಯ ಆಗಿರುತ್ತದೆ. ನನ್ನ ತಂದೆಯ ತಾಯಿಯ ಹೆಸರು ಚಿಕ್ಕಹನುಮಕ್ಕ ಆಗಿರುತ್ತದೆ. ನನ್ನ ತಂದೆ ಹನುಮಯ್ಯರವರಿಗೆ ಇಬ್ಬರು ಸಹೋದರರು ಇದ್ದರು. ನನ್ನ ತಂದೆ ಮತ್ತು ಸಹೋದರರು 1964 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. 1964 ರ ಮೊದಲು ನಮ್ಮ ಕುಟುಂಬದ ವ್ಯವಹಾರವನ್ನು ಗಾಳಿಹನುಮಯ್ಯ ಮತ್ತು ಚಿಕ್ಕಹನುಮಕ್ಕ ಮಾಡುತ್ತಿದ್ದರು ಎಂದರೆ ನಿಜ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ನಿಜ. ನಾನು ಮೊದಲನೆ ಹೆಂಡತಿಯಾದ ದೇಕಮ್ಮರವರ ಮಗ ಆಗಿರುತ್ತೇನೆ. 2 ರಿಂದ 4 ನೇ ಪ್ರತಿವಾದಿಗಳು ನನ್ನ ತಂದೆಯ ಎರಡನೇ ಹೆಂಡತಿಯಾದ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ನಿಜ. ನನಗೆ 8-9 ವರ್ಷ ವಯಸ್ಸು ಆಗಿದ್ದಾಗ ನನ್ನ ತಾಯಿ ತೀರಿಕೊಂಡಿದ್ದರು. ನನಗೆ 10 ವರ್ಷ ವಯಸ್ಸು ಆದಾಗ ನನ್ನ ತಂದೆ 2 ನೇ ಮದುವೆ ಮಾಡಿಕೊಂಡಿದ್ದು 1968 ರಲ್ಲಿ ಮಾಡಿಕೊಂಡಿರುತ್ತಾರೆ. ನಾನು 1984 ರಲ್ಲಿ ಮದುವೆಯಾಗಿರುತ್ತೇನೆ. ನನ್ನ ಮದುವೆಯಾದ ನಂತರ ನನ್ನ ಕುಟುಂಬದ ವ್ಯವಹಾರ ಪ್ರತ್ಯೇಕವಾಗಿ ನಡೆಸಿಕೊಂಡು ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ನಾವು 1988 ರಿಂದ ಬೇರೆ ಕುಟುಂಬವಾಗಿ ಪ್ರತ್ಯೇಕ ವ್ಯವಹಾರ ಮಾಡಲು ಶುರುಮಾಡಿರುತ್ತೇವೆ. ನಾನು ಸ್ವಯಾರ್ಜಿತವಾಗಿ ನನ್ನ ಹೆಸರಿಗೆ ಮತ್ತು ನನ್ನ ಹೆಂಡತಿಯ ಹೆಸರಿಗೆ ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದರೆ ನಿಜ. ನನ್ನ ಹೆಸರಿಗೆ ಮತ್ತು ನನ್ನ ಹೆಂಡತಿಯ ಹೆಸರಿಗೆ ಖರೀದಿ ಮಾಡಿದ ಆಸ್ತಿಗಳನ್ನು ಈಗ ಮಾರಾಟ ಮಾಡಿದ್ದು ವ್ಯವಹಾರಗಳನ್ನು ನಾನೇ ಮಾಡುತ್ತೇನೆ. ನಾನು ನನ್ನ ಹೆಸರಿಗೆ ಮತ್ತು ನನ್ನ ಹೆಂಡತಿಯ ಹೆಸರಿಗೆ ಆಸ್ತಿಗಳನ್ನು ಖರೀದಿ ಮಾಡುವಾಗ ಮತ್ತು ಅವುಗಳನ್ನು ಮಾರಾಟ ಮಾಡುವಾಗ ನನ್ನ ತಂದೆ ಹನುಮಯ್ಯ ಜೀವಂತವಿದ್ದರು ಎಂದರೆ ನಿಜ. ನಾನು ಪ್ರತ್ಯೇಕವಾಗಿ ವ್ಯವಹಾರಗಳನ್ನು ಮಾಡಿಕೊಳ್ಳುತ್ತಿದ್ದುದ್ದರ ಬಗ್ಗೆ ನನ್ನ ತಂದೆ ಮತ್ತು ಪ್ರತಿವಾದಿಗಳು ಅದರಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ನಿಜ.

ನನ್ನ ಅಜ್ಜ ಮತ್ತು ಅಜ್ಜಿ ಪಿತ್ರಾರ್ಜಿತ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ಮೃತ್ಯುಪತ್ರದ ಮೂಲಕ ಭಾಗ ಎಂದು ನನಗೆ ಕೊಟ್ಟಿದ್ದರು ಎಂದರೆ ನಿಜ. ಆ ಆಸ್ತಿಗಳು ಪುನಗುಮಾರನಹಳ್ಳಿ ಸರ್ವೆ ನಂ 36

ಮತ್ತು ಸರ್ವೆ ನಂ 9/2 ಆಗಿರುತ್ತವೆ ಎಂದರೆ ನಿಜ. ನನಗೆ ಸದರಿ ಮೃತ್ಯುಪತ್ರದ ಮೂಲಕ ಬಂದ ಆಸ್ತಿಗಳ ಖಾತೆ ನನ್ನ ಹೆಸರಿಗೆ ಆಯ್ತು ಎಂದರೆ ನಿಜ. ಈ ಆಸ್ತಿಗಳು ಈಗ ಮಾರಾಟವಾಗಿರುತ್ತವೆ. ಅದೇ ರೀತಿ ನನ್ನ ತಂದೆ ನಮಗೆ ಬೇರೆಯಾಗಿ ಇರಲು ನಮ್ಮ ಗ್ರಾಮದಲ್ಲಿ ಒಂದು ಮನೆ ಮತ್ತು ನಿವೇಶನ ಕೊಟ್ಟಿದ್ದರು ಎಂದರೆ ನಿಜ. ಮನೆ ಮತ್ತು ನಿವೇಶನದಲ್ಲಿ ಈಗ ನಾವು ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದೇವೆ. ಪ್ರತಿವಾದಿಗಳು ಬೇರೆ ಮನೆಯಲ್ಲಿ ಬೇರೆಯಾಗಿ ವಾಸವಿರುತ್ತಾರೆ ಎಂದರೆ ನಿಜ. ನನಗೆ ಮೃತ್ಯುಪತ್ರದ ಮೂಲಕ ಕೊಟ್ಟ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಪಿತ್ರಾರ್ಜಿತ ಆಸ್ತಿಗಳಲ್ಲಿ ಪ್ರತಿವಾದಿಗಳು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ.

ನನಗೆ ಮೃತ್ಯುಪತ್ರದ ಮೂಲಕ ಭಾಗದಲ್ಲಿ ಬಂದ ಆಸ್ತಿಗಳನ್ನು ಮಾರಾಟ ಮಾಡುವಾಗ ಮಾರಾಟದ ವ್ಯವಹಾರಕ್ಕೆ ನನ್ನ ತಂದೆ ಹನುಮಯ್ಯ ಮತ್ತು ಪ್ರತಿವಾದಿಗಳು ಭಾಗವಹಿಸಿರಲಿಲ್ಲ. ನನಗೆ ಮೃತ್ಯುಪತ್ರದ ಮೂಲಕ ಬಂದ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳನ್ನು ಹನುಮಯ್ಯರವರು 1ನೇ ಪ್ರತಿವಾದಿಯ ಮಕ್ಕಳಿಗೆ ಭಾಗ ಮಾಡಿ ಮೃತ್ಯುಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಇರಬಹುದು ಆದರೆ ತಪ್ಪು ಇರುತ್ತದೆ ಎಂದು ಹೇಳುತ್ತಾರೆ ಮತ್ತು ಅದನ್ನು ನಾನು ಒಪ್ಪುವುದಿಲ್ಲ. 1ನೇ ಪ್ರತಿವಾದಿಯ ಮಕ್ಕಳಿಗೆ ಹೋದ ಆಸ್ತಿಗಳ ಖಾತೆ ಮಾಡಬೇಕೆಂದು ವಿಶೇಷ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಆದೇಶ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಖಾತೆ ಮಾಡಬಾರದೆಂದು ನಾವು ತಹಶೀಲ್ದಾರ್ ರವರ ಕಛೇರಿಯಲ್ಲಿ ತಕರಾರು ಸಲ್ಲಿಸಿದ್ದೆವು ಎಂದರೆ ನಿಜ. ನಾವು ತಕರಾರನ್ನು ಸಲ್ಲಿಸಿದ್ದರು ಸಹ ನಮಗೆ ನೋಟಿಸ್‌ಗಳನ್ನು ಕೊಟ್ಟು ನಮ್ಮ ತಕರಾರುಗಳನ್ನು ತಳ್ಳಿ ಹಾಕಿ ಖಾತೆ ಮಾಡಬೇಕೆಂದು ತಹಶೀಲ್ದಾರ್ ರವರು ಆದೇಶ ಮಾಡಿರುತ್ತಾರೆ ಎಂದರೆ ನಮಗೆ ನೋಟಿಸ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾವು ತಹಶಿಲ್ದಾರ್ ಕಛೇರಿಗೆ ತಕರಾರನ್ನು ಸಲ್ಲಿಸಿದ ನಂತರ ಅದು ಏನು ಆಗಿರುತ್ತದೆಂದು ಪರಿಶೀಲನೆ ಮಾಡಿಲ್ಲ. ನಾವು ತಕರಾರನ್ನು ಸಲ್ಲಿಸಿದ ನಂತರ ಆದೇಶ ಆಗಿದ್ದು ಅದರ ಬಗ್ಗೆ ನೋಟಿಸನ್ನು ಕೊಟ್ಟಿದ್ದರು ಸಹ ಏನು ಆಗಿರುತ್ತದೆ ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**